

ಕಲೆ: ಕೌಶಿಕ್

# ಹೊಸದಾರಿಯ ಹಂಬಲ

ಹೊಸತಿನ ಹಂಬಲ– ಅದರಲ್ಲೂ ಜೀವಪರವಾದ ಹೊಸತಿನ ಹಂಬಲ– ನಾಳೆಗಳ ಬಗ್ಗೆ ನಂಬಿಕೆ ಕಳೆದುಕೊಳ್ಳದಂತೆ ಜಗತ್ತನ್ನು ಪೊರೆಯುತ್ತಿರುವಂತಿದೆ. ಕಲೆಗಾರ, ಸಾಹಿತಿಯ ಪಾಲಿಗಂತೂ ಹೊಸತಿನ ಕನಸು ಹಾಗೂ ಸೃಷ್ಟಿ ಬದುಕಿನ ಧ್ಯೇಯವೇ ಆಗಿದೆ. ಬದುಕನ್ನು ನಿತ್ಯನೂತನಗೊಳಿಸುವ ಹಂಬಲ ಈ ಸಂಚಿಕೆಯ ಬರಹಗಳಲ್ಲಿ ಅಂತರ್ಜಲದಂತೆ ಇರುವುದನ್ನು ಸಹೃದಯರು ಗಮನಿಸಬಹುದು.

'ಮತ್ತೇನನೊಲ್ಲೆನು, ಭರತಭೂಮಿಯೊಳಿರುವುದೇ ಎನಗೊಂದು ಸುಖವಿಹುದು!' ಎನ್ನುವ ಸಾಲಿ ರಾಮಚಂದ್ರ ರಾಯರ 'ಹಂಬಲು' ಕವಿತೆಯಿಂದ ಆರಂಭಗೊಳ್ಳುವ ಈ ಸಂಚಿಕೆಯ ಜೀವಧ್ವನಿ, ಎ.ಎಂ. ಮದರಿ ಅವರ ಸಂದರ್ಶನದಲ್ಲಿ ಹೆಚ್ಚು ಸಾಂದ್ರವಾಗಿ, ಹೊಸ ಧ್ವನಿಗಳನ್ನು ಕೂಡಿಸಿಕೊಂಡು ಎದುರಾಗುತ್ತದೆ. 'ಹೊಸದಾರಿ, ಹೊಸಗಾಳಿ ಯಾವ ಕಾಲಕ್ಕ ಬರ್ತದೋ' ಎನ್ನುವ ಮದರಿ ಅವರ ಉದ್ಗಾರ, ವೈಯಕ್ತಿಕ ಹಾಗೂ ಸಾಮುದಾಯಿಕ ನೆಲೆಯನ್ನು ಮೀರಿ, ಎಲ್ಲ ಕಾಲದ ಮನುಷ್ಯರ ಆರ್ತ ಪ್ರಾರ್ಥನೆಯಂತೆ ಭಾಸವಾಗುತ್ತದೆ. ಮದರಿ ಅವರ ಮಾತುಗಳು ಸುತ್ತಲಿನ ಬದುಕನ್ನು ಇನ್ನಷ್ಟು ಸಹಾನುಭೂತಿಯಿಂದ ನೋಡಲು ಹಾಗೂ ನಮ್ಮೊಳಗನ್ನು ತಡಕಿಕೊಳ್ಳಲು ಒತ್ತಾಯಿಸುವಂತಿವೆ.

ಅಂಬೇಡ್ಕರ್ ನೆನಪುಗಳ ಏಪ್ರಿಲ್ ತಿಂಗಳಿಗೂ ಜೀವಪರವಾದ ಹಂಬಲಕ್ಕೂ ಬಿಡಿಸಿ ನೋಡಲಾಗದ ಸಂಬಂಧ. ಈ ಸಂಚಿಕೆಯ ಕಥೆ–ಕವಿತೆಗಳು ನೇರವಾಗಿಯೋ ಸೂಚ್ಯವಾಗಿಯೋ ಅಂಬೇಡ್ಕರ್ ಬದುಕಿನ ಆಶಯಗಳಿಗೆ ಸ್ಪಂದಿಸುವಂತಿವೆ. ಈ ಭಾವಸ್ಪಂದನದ ಭಾಗವಾಗಿಯೇ, ಭಿನ್ನ ಭಾಷಿಕ ಜಗತ್ತುಗಳನ್ನು ಪ್ರವೇಶಿಸಲು ಅನುವು ಮಾಡಿಕೊಡುವ ಅನುವಾದದ ಜೀವಶಕ್ತಿಯ ಬಗೆಗಿನ ಬರಹ ಹಾಗೂ ಎನ್.ಕೆ. ಹನುಮಂತಯ್ಯನರ ಕವಿತೆಯ ಮರು ಓದಿನ ಟಿಪ್ಪಣಿಯನ್ನು ಗಮನಿಸಬಹುದು.

ಬೇಸಿಗೆಯ ಅಲೆಗಳು ಬಲಗೊಳ್ಳುತ್ತಿರುವ ಸಂದರ್ಭದಲ್ಲಿ ಸಹೃದಯರ ಅಂತರಂಗದ ಧಗೆಯನ್ನು ಶಮನಗೊಳಿಸುವ 'ಮಯೂರ'ದ ಪ್ರಯತ್ನ ಓದುಗರಿಗೆ ಇಷ್ಟವಾಗುತ್ತದೆನ್ನುವ ನಂಬಿಕೆ ನಮ್ಮದು.

**ಮಯೂರ ಬಳಗ**

editormy@mayura.co.in